SC:66/2024
PW:03 CW:03

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 66/2024

| | |
|---|---|
| PW | 03 |
| CW | 03 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 25.06.2026.

| | | |
|---|---|---|
| ಸಾಕ್ಷಿಯ ಹೆಸರು | : | ಅಂಕಿತ್ |
| ತಂದೆಯ ಹೆಸರು | : | ನರಸಿಂಹಮೂರ್ತಿ |
| ವಯಸ್ಸು | : | 26 ವರ್ಷ |
| ಉದ್ಯೋಗ | : | ಫೈನಾನ್ಸ್ ಕಂಪನಿಯಲ್ಲಿ ಕೆಲಸ |
| ವಾಸಸ್ಥಳ | : | ಗೌರಿಬಿದನೂರು ಟೌನ್ |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

1. ಚಾಸಾ-2 ರವರ ಪರಿಚಯ ಇಲ್ಲ. ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ 3 ನೇ ಆರೋಪಿ ಹಾಗೂ ವಿ ಸಿ ಮುಖಾಂತರ ಹಾಜರುಪಡಿಸಿದ 2 ನೇ ಆರೋಪಿಯ ಪರಿಚಯ ಇಲ್ಲ ಹಾಗೂ ನೋಡಿರುವುದಿಲ್ಲ. ಈ ದಿನ 1 ನೇ ಆರೋಪಿ ಗೈರು ಹಾಜರರಿದ್ದು ಅವರನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಶ್ರೀ. ಹೆಚ್.ಎನ್.ಎಂ. ವಕೀಲರು ಹೇಳಿದ ಕಾರಣ ಗೈರು ಹಾಜರಾತಿಯನ್ನು ಪುರಸ್ಕರಿಸಲಾಯಿತು.

2. ಈ ನಾನು ನೋಡುತ್ತಿರುವ ಸ್ಥಳ ಪಂಚನಾಮೆಯಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಎಂದು ಸಾಕ್ಷಿ ಗುರುತಿಸಿದ ಕಾರಣ ಸಹಿ ಇರುವ ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು. ಸುಮಾರು 1 ವರೆ 2 ವರ್ಷಗಳ ಹಿಂದೆ ನಿಪಿ-2 ಕ್ಕೆ ಗೌರಿಬಿದನೂರು ಟೌನ್ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನನ್ನ ಸಹಿ ಪಡೆದ ನಂತರ ಪೊಲೀಸರು ಫೋಟೋ ತೆಗೆದಿರುತ್ತಾರೆ. ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ. ನಿಪಿ-2 ರಲ್ಲಿ ಬರೆದ ವಿಚಾರ ನನಗೆ ತಿಳಿದಿಲ್ಲ. ಈ ಸಂಬಂಧ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

3. ದಿಃ 01.03.2024 ರಂದು ನನಗೆ ಮತ್ತು ಚಾಸಾ-2 ರವರಿಗೆ ಗೌರಿಬಿದನೂರು ನಗರ ಪೊಲೀಸರು ಬೆಳಗಿನ ಜಾವ 1.00 ಗಂಟೆ ಸುಮಾರಿಗೆ ಡಿ.ಪಾಳ್ಯ ರಸ್ತೆ ಮೂಲಕ ಗೊಟಕನಾಪುರ ಗ್ರಾಮಕ್ಕೆ ಹೋಗುವ ರಸ್ತೆಯ ಎಡಬದಿಯಲ್ಲಿನ ಪೊದೆಯ ಬಳಿ ಯಾರೋ ಜನರು ಗುಂಪಾಗಿ ಕುಳಿತುಕೊಂಡು ಏನೋ ಹೊಂಚು ಹಾಕಿ, ಕೈಗಳಲ್ಲಿ ದೊಣ್ಣೆ, ಮಚ್ಚು ಹಿಡಿದುಕೊಂಡು ಕುಳಿತಿರುವುದು ಕಂಡುಬಂದಿದ್ದು, ಸದರಿಯವರು ರಸ್ತೆಯಲ್ಲಿ ಓಡಾಡುವ ವಾಹನಗಳನ್ನು, ಜನರನ್ನು ಅಡ್ಡಗಟ್ಟಿ ಅವರ ಮೇಲೆ ಹಲ್ಲೆ ಮಾಡಿ ಹೆದರಿಸಿ ಅವರ ಬಳಿ ಇರುವ ಹಣ, ಮೊಬೈಲ್ ಮತ್ತು ಬಂಗಾರದ ಆಭರಣಗಳನ್ನು ಕಿತ್ತುಕೊಳ್ಳುವ ಉದ್ದೇಶದಿಂದ

ಅಪಾಯಕಾರಿ ಆಯುಧಗಳನ್ನು ಮತ್ತು ವಸ್ತುಗಳನ್ನು ಇಟ್ಟುಕೊಂಡು ಢಕಾಯಿತಿ ಮಾಡಲು ಹೊಂಚು ಹಾಕುತ್ತಿದ್ದು, ಆಗ ಚಾಸಾ–1 ಮತ್ತು ಸಿಬ್ಬಂದಿಗಳಾದ ಚಾಸಾ–11 ರಿಂದ ಚಾಸಾ–15 ರವರೊಂದಿಗೆ ನಮ್ಮನ್ನು ಸರ್ಕಾರಿ ಜೀಪಿನಲ್ಲಿ ಕರೆದುಕೊಂಡು ಅಲ್ಲಿಗೆ ಹೋಗಿದ್ದು, ಜೀಪಿನಿಂದ ನಾವು ಮತ್ತು ಚಾಸಾ–1 ಮತ್ತು ಸಿಬ್ಬಂದಿಗಳು ಇಳಿದು ಮರೆಯಲ್ಲಿ ನಿಂತು ನೋಡಲಾಗಿ 5 ಜನರು ಲಾಂಗು, ದೊಣ್ಣೆ, ಮಾರಕ ಅಸ್ತ್ರಗಳನ್ನು ಇಟ್ಟುಕೊಂಡಿದ್ದು, ನಾವು ಪೊದೆಯ ಬಳಿ ಹೋಗುತ್ತಿದ್ದ ಹಾಗೆ ಗುಂಪಿನಲ್ಲಿ ಇದ್ದ 5 ಜನರ ಪೈಕಿ ಇಬ್ಬರು ಆಸಾಮಿಗಳು ಓಡಿಹೋಗಿದ್ದು, ಮೂವರನ್ನು ಪೋಲೀಸರು ಹಿಡಿದುಕೊಂಡಿದ್ದು, ಅವರ ಹೆಸರುಗಳು 1. ನವೀನ್ ಕುಮಾರ್ 2. ಆನಂದ ಬಿನ್ ವೆಂಕಟೇಶ್ 3. ಮಣಿಕಂಠ ಬಿನ್ ಸುರೇಶ್ ಕುಮಾರ್ ಎಂದು ತಿಳಿಸಿದ್ದು, ನಂತರ ಓಡಿಹೋದವರ ಹೆಸರನ್ನು ಕೇಳಲಾಗಿ ಅವರು ಹೆಸರುಗಳು ಧನುಷ್ ಅಲಿಯಾಸ್ ರೆಬೆಲ್ ಬಿನ್ ಲೇಟ್ ಗಂಗಾಧರಪ್ಪ ಹಾಗೂ ಅಕ್ರಂ ಪಾಷಾ ಅಲಿಯಾಸ್ ಅಕ್ರಂ ಅಲಿಯಾಸ್ ಚಿಕ್ಕು ಬಿನ್ ಇಕ್ಬಾಲ್ ಅಲಿಯಾಸ್ ಮಿರ್ಜ ಎಂದು ತಿಳಿಸಿದರು. ನಂತರ ಪಿ.ಎಸ್.ಐ ರವರು 1 ರಿಂದ 3 ನೇ ಆರೋಪಿತರ ಸ್ಥಳದಲ್ಲಿ ಪರಿಶೀಲಿಸಿದಾಗ 1 ನೇ ಆರೋಪಿಯ ಬಳಿ ಇದ್ದ ಒಂದು ಕಬ್ಬಿಣದ ರಾಡ್, 2 ನೇ ಆರೋಪಿ ಬಳಿ ಇದ್ದ ಒಂದು ಕಬ್ಬಿಣದ ಮಚ್ಚು ಮತ್ತು 3 ನೇ ಆರೋಪಿಯ ಬಳಿ ಇದ್ದ ಒಂದು ಚಾಕುವನ್ನು ಹಾಗೂ ಓಡಿಹೋದ ಆರೋಪಿಗಳು ಸ್ಥಳದಲ್ಲಿ ಬಿಸಾಡಿ ಹೋಗಿದ್ದ ಒಂದು ಕಬ್ಬಿಣದ ರಾಡು ಮತ್ತು ಒಂದು ದೊಣ್ಣೆಯನ್ನು ಪ್ರತ್ಯೇಕವಾಗಿ ಒಂದು ಬಿಳಿಯ ಬಟ್ಟೆಯ ಚೀಲದಲ್ಲಿ ಹಾಕಿ ಹೊಲೆದು ಒರಗಿನಿಂದ ಸೀಲು ಮಾಡಿ, ಪಿ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿ ಅವುಗಳ ಮೇಲೆ ನಮ್ಮ ಹಾಗೂ ಅವರ ಸಹಿ ಇರುವ ಚೀಟಿಯನ್ನು

ಅಂಟಿಸಿರುತ್ತಾರೆ ಹಾಗೂ ಪಂಚನಾಮೆಯನ್ನು ಬೆಳಗಿನ ಜಾವ 2.15 ರಿಂದ 3.30 ಗಂಟೆ ನಮ್ಮ ಸಮಕ್ಷಮದಲ್ಲಿ ಪಿ.ಎಸ್.ಐ ರವರು ಪೊಲೀಸ್ ಜೀಪ್ ಬೆಳಕಿನಲ್ಲಿ ಟೈಪ್ ಮಾಡಿಸಿ ನಂತರ ಪ್ರಿಂಟ್ ತೆಗೆದು ಓದಿ ಹೇಳಿದ್ದರು ಎಂದರೆ ಸರಿಯಲ್ಲ. ನಂತರ ಸೆರೆ ಸಿಕ್ಕ ಆರೋಪಿತರನ್ನು ವಶಪಡಿಸಿಕೊಂಡು ಪೊಲೀಸ್ ಠಾಣೆಗೆ ತೆಗೆದುಕೊಂಡು ಬಂದಿರುತ್ತಾರೆ. ನಮ್ಮ ಸಮಕ್ಷಮ ನಿಪಿ–2 ರಂತೆ ಪಂಚನಾಮೆ ಮಾಡಿ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿದ್ದರೂ ಸಹ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ಈಗ ಓದಿ ಹೇಳಿದಂತೆ " ದಿಃ 01.03.2024 ರಂದು ಬೆಳಗಿನ ಜಾವ 2.00 ಗಂಟೆಯಲ್ಲಿ .............................................................. ................................ ........................................................................................................................ ...................... ಮೂರು ಜನ ಆರೋಪಿತರನ್ನು ನೋಡಿದ್ದು, ಪುನಃ ನೋಡಿದರೆ ಗುರುತಿಸುತ್ತೇನೆ" ಎಂದು ಈಗ ಓದಿ ಹೇಳಿದ ರೀತಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ–3 ಎಂದು ಗುರುತಿಸಲಾಯಿತು.

4. ನನಗೆ ಘಟನೆಯ ಬಗ್ಗೆ ಮಾಹಿತಿ ಇದ್ದು, ಆ ಬಗ್ಗೆ ನಾನು ನಿಪಿ–3 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಹಾಗೂ ನಮ್ಮ ಸಮಕ್ಷಮ ನಿಪಿ–2 ರಂತೆ ಪಂಚನಾಮೆ ಮಾಡಿ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಈಗ ನನಗೆ ತೋರಿಸುತ್ತಿರುವ ಒಂದು ಕಬ್ಬಿಣದ ಲಾಂಗ್, ಒಂದು ಕಬ್ಬಿಣದ ಮಚ್ಚು , ಒಂದು ಚಾಕುವನ್ನು ಒಂದು ಕಬ್ಬಿಣದ ರಾಡು ಮತ್ತು ಒಂದು ದೊಣ್ಣೆಗಳನ್ನು ಚಾಸಾ–15 ರವರು ನಮ್ಮ ಸಮಕ್ಷಮ 1 ರಿಂದ 3 ನೇ ಆರೋಪಿತರಿಂದ ಹಾಗೂ 4 ಮತ್ತು 5 ನೇ ಆರೋಪಿತರು ಸ್ಥಳದಲ್ಲಿ ಎಸೆದಿದ್ದ ಮೇಲೆ ಹೇಳಿದ ವಸ್ತುಗಳನ್ನು ನಿಪಿ–2 ಪಂಚನಾಮೆಯ ಮೂಲಕ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ರಿಂದ 3 ನೇ ಆರೋಪಿತ ಪರ ವಕೀಲರಿಂದಃ**

ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 25.06.2026 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು )**

ಓದಿ ಹೇಳಿ ಕೇಳಿ ಸರಿ ಇದೆ

**ಸಹಿ/–**
**(ಸಿದ್ದಣ್ಣ.ಬಿ.ಹಂದ್ರಾಳ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.